ಹೊಸ ಅರ್ಜಿ ಫಾರಂಗಳು	10,183
ನಗರ ಪ್ರದೇಶ ಬಡ ಕುಟುಂಬಗಳು	29,879
ಒಟ್ಟು	2,75,444

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ತ್ರಿವರ್ಣ ಪಡಿತರ ಚೀಟಿಗಳಿಗೆ ಹಸಿರು ಕಾರ್ಡ್ ಬದಲಾಯಿಸುವುದು.	ಹೊಸ ಕಾರ್ಡ್‌ಗಳು	ನಗರ ಪ್ರದೇಶ ಕಾರ್ಡ್‌ಗಳು	ಒಟ್ಟು
1.	ಶಿವಮೊಗ್ಗ	29719	2396	14815	46939
2.	ಭದ್ರಾವತಿ	34000	-	8482	42482
3.	ಚೆನ್ನಗಿರಿ	35370	-	-	35378
4.	ಹೊನ್ನಾಳಿ	34878	1221	-	36099
5.	ತೀರ್ಥಹಳ್ಳಿ	17841	532	819	19192
6.	ಸಾಗರ	16040	1239	3471	20750
7.	ಶಿಕಾರಿಪುರ	27656	1479	1392	30527
8.	ಸೊರಬ	24256	1963	-	26219
9.	ಹೊಸನಗರ	15622	1353	-	16975
	ಒಟ್ಟು	235382	10183	28979	275444

ಆ) ಭದ್ರಾವತಿ ತಾಲೋಕಿಗೆ 1519 ಹಸಿರು ಕಾರ್ಡುಗಳನ್ನು ಮತ್ತು ಚೆನ್ನಗಿರಿ ತಾಲ್ಲೂಕಿಗೆ 2002 ಹಸಿರು ಕಾರ್ಡುಗಳನ್ನು ಇನ್ನು ವಿತರಣೆ ಮಾಡಿರುವುದಿಲ್ಲ. ಇವುಗಳನ್ನು ಜುಲೈ 96ನೇ ತಿಂಗಳಿನ ಅಂತ್ಯದೊಳಗೆ ವಿತರಣೆ ಮಾಡಲಾಗುವುದು.

ವಿಷಯ:- ರಾಜ್ಯದಲ್ಲಿ ಪ್ರತಿ ರೇಶನ್ ಕಾರ್ಡಿಗೆ (ಹಸಿರು ಕಾರ್ಡು, ರೇಶನ್ ಕಾರ್ಡು) ವಿತರಣೆ ಮಾಡುವ ವಸ್ತುಗಳ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 697 (1205)

ಶ್ರೀ ಎ.ರುಕ್ಮಯ್ಯ ಪೂಜಾರಿ:- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ರೇಷನ್ ಕಾರ್ಡ್‌ದಾರರಿಗೆ (ಹಸಿರು ಕಾರ್ಡ್, ಕೇಸರಿ ಕಾರ್ಡ್)ಅಕ್ಕಿ, ಸಕ್ಕರೆ ಹಾಗೂ ಇತರೆ ಆಹಾರ ವಸ್ತುಗಳನ್ನು ಕೊಡುವ ಪ್ರಮಾಣವೆಷ್ಟು? ಇದನ್ನು ಯಾವ ಆಧಾರದ ಮೇಲೆ ನೀಡಲಾಗುವುದು.

ಆ) ವಿತರಿಸುವಲ್ಲಿ ಅಸಮತೋಲನವಿರುವುದು ನಿಜವೇ? ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಸರ್ಕಾರದ ಆದೇಶ ಸಂಖ್ಯೆ; ಎಫ್‌ಸಿಎಡ್ 439 ಸಿಆರ್‌ಎ 94 ದಿನಾಂಕ 16-3-95.

ಹಸಿರು ಪಡಿತರ ಚೀಟಿದಾರರಿಗೆ:-

ಅಕ್ಕಿ ಅಥಶಾ ಗೋಧಿ ಪಡಿತರ ಚೀಟಿಯೊಂದಕ್ಕೆ ತಿಂಗಳಿಗೆ 10 ಕೆ.ಜಿಯಂತೆ ಅಥವಾ ಪಡಿತರ ಚೀಟಿದಾರರ ಇಚ್ಛೆಯ ಮೇರೆಗೆ ಅಕ್ಕಿ ಹಾಗೂ ಗೋಧಿ ಮಿಶ್ರಣ 10 ಕೆ.ಜಿ.ಗೆ ಮೀರದಂತೆ ಸಕ್ಕರೆ:- ಪಡಿತರ ಚೀಟಿಯೊಂದಕ್ಕೆ ತಿಂಗಳಿಗೆ $1^{1}/_{4}$ ರಿಂದ 2 ಕೆ.ಜಿಯವರೆಗೆ.

ಸೀಮೆ ಎಣ್ಣೆ:- ಪಡಿತರ ಚೀಟಿಯೊಂದಕ್ಕೆ ತಿಂಗಳಿಗೆ 3 ರಿಂದ 4 ಲೀಟರ್‌ಗಳು

ಕೇಸರಿ ಪಡಿತರ ಚೀಟಿದಾರರಿಗೆ:-

ಅಕ್ಕಿ:- ಪಡಿತರ ಚೀಟಿಯೊಂದಕ್ಕೆ ತಿಂಗಳಿಗೆ 7 ಕೆ.ಜಿಯಂತೆ

ಗೋಧಿ:- ಪಡಿತರ ಚೀಟಿಯೊಂದಕ್ಕೆ ತಿಂಗಳಿಗೆ 3 ರಿಂದ 5ಕೆ.ಜಿ.ಯವರೆಗೆ.

ಸಕ್ಕರೆ:- ಪಡಿತರ ಚೀಟಿಯೊಂದಕ್ಕೆ ತಿಂಗಳಿಗೆ $1^{1}/_{4}$ ರಿಂದ 2 ಕೆ.ಜಿ.ಯಂತೆ

ಸೀಮೆಎಣ್ಣೆ:- ಪಡಿತರ ಚೀಟಿಯೊಂದಕ್ಕೆ ತಿಂಗಳಿಗೆ 3 ರಿಂದ ಲೀಟರ್‌ರವರೆಗೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡುವ ಆಹಾರ ಧಾನ್ಯಗಳ ಪ್ರಮಾಣವನ್ನವಲಂಬಿಸಿ ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ಸಂಖ್ಯೆಯ ಆಧಾರದ ಮೇಲೆ ಪಡಿತರ ಚೀಟಿದಾರರಿಗೆ ವಿತರಣಾ ಪ್ರಮಾಣ ನಿಗದಿ ಪಡಿಸಲಾಗಿದೆ.

ಆ) ಸಕ್ಕರೆ ಹಾಗೂ ಸೀಮೆಎಣ್ಣೆ ವಿತರಣೆಯಲ್ಲಿ ಅಸಮತೋಲನವಿರುತ್ತದೆ. ಈ ಬಗ್ಗೆ ಪಡಿತರ ಚೀಟಿದಾರರಿಗೆ ವಿತರಣಾ ಪ್ರಮಾಣ ಹೆಚ್ಚಿಸಲು ವಿಶೇಷವಾಗಿ ಸಕ್ಕರೆ ಹಾಗೂ ಸೀಮೆಎಣ್ಣೆಯನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ವಿಷಯ:- ಮಳಲೂರು ಏತ ನೀರಾವರಿ ಯೋಜನೆ ಕುರಿತು